# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ವಿಜಯಪುರದ ಆರೆಸ್ಸೆಸ್ ಸ್ವಯಂಸೇವಕರಿಂದ
ಮಲೇರಿಯಾ ತಪಾಸಣೆ-ಚಿಕಿತ್ಸೆ ಹಾಗೂ ಜಾಗೃತಿ ಕಾರ್ಯಕ್ರಮ.



ಸಂಪುಟ : 38 ಸಂಚಿಕೆ : 2 ದುರ್ಮುಖಿ–ಶ್ರಾವಣ ಕಲಿಯುಗಾಬ್ದ 5117 1–9–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಪಾಕಿಸ್ತಾನದಿಂದ ಮುಕ್ತಿ ಬಯಸುತ್ತಿರುವ ಬಲೂಚಿಸ್ತಾನ, ಪಾಕ್ ಆಕ್ರಮಿತ ಕಾಶ್ಮೀರ, ಗಿಲ್ಗಿಟ್ ಬಾಲ್ಟಿಸ್ತಾನ

ಕೆಂಪುಕೋಟೆಯ ವೇದಿಕೆಯಿಂದ ಸ್ವಾತಂತ್ರ್ಯೋತ್ಸವದ ದಿನ ಮಾತನಾಡುತ್ತ ಪ್ರಧಾನಿ ನರೇಂದ್ರ ಮೋದಿ ಬಲೂಚಿಸ್ತಾನ, ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಗಿಲ್ಗಿಟ್ ಬಾಲ್ಟಿಸ್ತಾನಗಳನ್ನು ಉಲ್ಲೇಖಿಸಿದರು. ಒಂದು ನೂರು ನಿಮಿಷಗಳ ಭಾಷಣದಲ್ಲಿ ಕೇವಲ ಎರಡು ಸಾಲುಗಳು ಈ ವಿಷಯವನ್ನು ಸ್ಪರ್ಶಿಸಿದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಸಂಚಲನವನ್ನು ಹುಟ್ಟಿಸಿದೆ. ಈ ಮೂರೂ ಪ್ರದೇಶದ ಜನರು ಭಾರತದ ನಿಲುವಿಗೆ ಪ್ರಧಾನಿಯನ್ನು ಅಭಿನಂದಿಸಿದ್ದಾರೆ. ಪಾಕಿಸ್ತಾನದೊಂದಿಗೆ ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಗಡಿಯಾಚೆಯ ಭಯೋತ್ಪಾದನೆಯ ವಿಷಯ ಮಾತ್ರ ಚರ್ಚೆಗಿದೆ ಎನ್ನುವ ಭಾರತದ ಸ್ಪಷ್ಟ ನಿಲುವಿನ ಜೊತೆಗೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಿಂದ ಹೊರಹೋಗಿ ಎಂದು ಪಾಕಿಸ್ತಾನಕ್ಕೆ ಖಡಕ್ ಸಂದೇಶವನ್ನು ಭಾರತ ರವಾನಿಸಿದೆ.

ಭಾರತದ ಅವಿಭಾಜ್ಯ ಭಾಗವಾಗಿರುವ ಜಮ್ಮು–ಕಾಶ್ಮೀರ ರಾಜ್ಯದಲ್ಲಿ ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ಕೊಡುವುದರ ಜೊತೆಗೆ ಭಯೋತ್ಪಾದನೆಯ ಮೂಲಕ ನಕಲಿ ಯುದ್ಧತಂತ್ರವನ್ನು ಹೆಣೆಯುವುದರ ವಿರುದ್ಧ ಭಾರತ ಮೊದಲಿನಿಂದಲೂ ಖಂಡಿಸುತ್ತಲೇ ಬಂದಿದೆ. ಕಾಶ್ಮೀರಕ್ಕೆ ಸ್ವಾತಂತ್ರ್ಯ ನೀಡಬೇಕು ಎಂದು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಬೊಬ್ಬಿರಿಯುವ ಪಾಕಿಸ್ತಾನ ಕಳೆದ 10 ವರ್ಷಗಳಿಂದ ಬಲೂಚಿಸ್ತಾನವನ್ನು ಪಾಶವೀ ಸೈನ್ಯಶಕ್ತಿಯಿಂದ ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದೆ. ಬಲೂಚಿಸ್ತಾನ ಜನರು ಪಾಕಿಸ್ತಾನ ನಡೆಸಿರುವ ಅತ್ಯಾಚಾರ ಬರ್ಬರತೆಯ ವಿರುದ್ಧ ಸ್ವಾತಂತ್ರ್ಯಕ್ಕಾಗಿ ದನಿಯೆತ್ತಿದ್ದಾರೆ. ಸ್ವಯಂ ಪ್ರಧಾನಿ ಮೋದಿ ಈ ವಿಷಯವನ್ನು ಪ್ರಸ್ತಾಪಿಸಿದ್ದು ಅಲ್ಲಿನ ಹೋರಾಟಗಾರರಿಗೆ ನೈತಿಕ ಬಲ ತಂದುಕೊಟ್ಟಿದೆ. ಹಾಗೆಯೇ ಪಾಕಿಸ್ತಾನದಿಂದ ಬೇಸತ್ತಿರುವ ಪಾಕ್ ಆಕ್ರಮಿತ ಕಾಶ್ಮೀರ ಹಾಗೂ ಪಾಕಿಸ್ತಾನದ ಜೊತೆಗೆ ಕೆಂಪು ಚೀನಿಯರಿಂದ ತೊಂದರೆ ಅನುಭವಿಸುತ್ತಿರುವ ಗಿಲ್ಗಿಟ್ ಬಾಲ್ಟಿಸ್ತಾನ ಪ್ರದೇಶದ ಜನರು ಭಾರತದತ್ತ ಆಶಾಭಾವನೆಯಿಂದ ನೋಡುತ್ತಿದ್ದಾರೆ.

1947ರಲ್ಲಿ ಭಾರತದಿಂದ ಪ್ರತ್ಯೇಕಗೊಂಡು ಪಾಕಿಸ್ತಾನವೆಂಬ ಇನ್ನೊಂದು ದೇಶ ಹುಟ್ಟಿಕೊಂಡರೂ ಇದುವರೆಗೂ ಒಂದು ಜವಾಬ್ದಾರಿಯುತ ರಾಷ್ಟ್ರವಾಗಿ ರೂಪುಗೊಳ್ಳುವಲ್ಲಿ ಅದು ವಿಫಲವಾಯಿತೆಂದೇ ಹೇಳಬಹುದು. ಪೂರ್ವ ಪಾಕಿಸ್ತಾನವೆಂದು ಕರೆಯಲ್ಪಡುತ್ತಿದ್ದ ಇಂದಿನ ಬಾಂಗ್ಲಾದೇಶ ಪಶ್ಚಿಮ ಪಾಕಿಸ್ತಾನದ ದಬ್ಬಾಳಿಕೆಯ ವಿರುದ್ಧ ಬಂಡೆದ್ದು 1971 ಸ್ವತಂತ್ರಗೊಂಡಿತು. ಬಾಂಗ್ಲಾ ವಿಮೋಚನೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಜಾಪ್ರಭುತ್ವವನ್ನು ಕಿತ್ತೆಸೆದು ಆಗಾಗ ಸರ್ವಾಧಿಕಾರವನ್ನು ತನ್ನ ಕೈಗೆ ತೆಗೆದುಕೊಳ್ಳುವ ಸೈನ್ಯ, ಇಸ್ಲಾಂ ಮೂಲಭೂತವಾದಿಗಳು, ಜಿಹಾದಿ ಭಯೋತ್ಪಾದಕರ ಕಪಿಮುಷ್ಟಿಗೆ ಸಿಕ್ಕಿ ಪಾಕಿಸ್ತಾನ ನಲುಗುತ್ತಿದೆ. ಭಾರತದೊಂದಿಗೆ ಮೂರು ಯುದ್ಧಗಳನ್ನು ಸೋತು ಭಯೋತ್ಪಾದನೆಯ ಮೂಲಕ ನಕಲಿ ಯುದ್ಧಹೂಡಿರುವ ಪಾಕಿಸ್ತಾನ ಇಂದು ಅದೇ ಭಯೋತ್ಪಾದಕರ ದಾಳಿಗೆ ತುತ್ತಾಗುತ್ತಿದೆ. ಭಯೋತ್ಪಾದನೆಯನ್ನು ರಫ್ತು ಮಾಡುವ ದೇಶವೆಂದೇ ವಿಶ್ವದಲ್ಲಿ ಪಾಕಿಸ್ತಾನ ಬಿಂಬಿತವಾಗುತ್ತಿದೆ. ಬಾಂಬ್ ಸ್ಫೋಟ ಉಗ್ರ ದಾಳಿಗಳು ಮಕ್ಕಳು ಮಹಿಳೆಯರನ್ನೂ ಬಿಡದಂತೆ ಸಾವಿರಾರು ಅಮಾಯಕ ಜನರನ್ನು ಬಲಿತೆಗೆದುಕೊಂಡಿದೆ. ಬಲೂಚಿಸ್ತಾನ ಪೆಟ್ರೋಲಿಯಂ ತೈಲ ಖನಿಜ ಸಂಪತ್ತಿನಿಂದ ಸಮೃದ್ಧವಾಗಿದ್ದರೂ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಇವರ ಪಾಕಿಸ್ತಾನ ವಿರುದ್ಧದ ಜನಾಕ್ರೋಶವನ್ನು ತನ್ನ ಸೈನ್ಯಬಲದಿಂದ ಹತ್ತಿಕ್ಕಿ ಈ ಪ್ರದೇಶವನ್ನು ನಿಯಂತ್ರಣದಲ್ಲಿರಿಸಿಕೊಂಡಿದೆ. ಪಂಜಾಬ್ ಪ್ರಾಂತದ ಸುನ್ನಿ ಮುಸಲ್ಮಾನರ ಬಿಗಿಹಿಡಿತದಲ್ಲಿರುವ ಪಾಕಿಸ್ತಾನದ ಆಡಳಿತದ ವಿರುದ್ಧ ಸಿಂಧ್ ಮತ್ತು ಪಶ್ಚಿಮ–ಉತ್ತರ ಗಡಿ ಪ್ರಾಂತಗಳಲ್ಲಿ ಜನಾಂದೋಲನ ರೂಪುಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಪಾಕಿಸ್ತಾನ ಛಿದ್ರವಾಗಲಿದೆಯೇ? ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ.





## ಚೀನಿಯರಿಂದ ಬಾಲ್ಗಿಟ್ ಬಾಲ್ಟಿಸ್ತಾನಕ್ಕೆ ಬೇಕು ಮುಕ್ತಿ

ಮಹಾರಾಜ ಹರಿಸಿಂಗ್ ಆಡಳಿತಕ್ಕೊಳಪಟ್ಟ ಅಖಂಡ್ ಜಮ್ಮು ಕಾಶ್ಮೀರದ ಭಾಗವಾಗಿತ್ತು ಉತ್ತರದ ಗಿಲ್ಗಿಟ್ ಬಾಲ್ಟಿಸ್ತಾನ. ಪ್ರಾಚೀನ ಸಿಲ್ಕ್ ರೂಟ್ ಹಾದುಹೋಗುವ ಈ ಆಯಕಟ್ಟಿನ ಪ್ರದೇಶ ಬ್ರಿಟಿಷ್ ಅಧಿಕಾರಿಗಳ ಕುತಂತ್ರದಿಂದಾಗಿ ಪಾಕಿಸ್ತಾನ ಸೇರಿತಲ್ಲದೇ 1947ರ ಮೊದಲ ಪಾಕ್ ಆಕ್ರಮಣದ ಕೇಂದ್ರಸ್ಥಾನವಾಯಿತು. ಪಾಕ್ ಆಕ್ರಮಿತ ಕಾಶ್ಮೀರದ ಭಾಗವಾಗಿರುವ ಗಿಲ್ಗಿಟ್ ಬಾಲ್ಟಿಸ್ತಾನವನ್ನು ತನ್ನ ಒಂದು ರಾಜ್ಯವೆಂದು ಪಾಕಿಸ್ತಾನ ಹೇಳಿಕೊಳ್ಳುತ್ತಿದೆ, ಇಲ್ಲೊಂದು ರಾಜ್ಯ ಸರ್ಕಾರವೂ ಇದೆ. ಇದು ಹೇರಳ ನೈಸರ್ಗಿಕ ಸಂಪತ್ತಿನ ಆಗರ. ಪಾಕಿಸ್ತಾನ ತನ್ನ ದೇಶದ ಜನರನ್ನು ವಲಸೆ ಕಳುಹಿಸಿ ಈ ಪ್ರದೇಶದ ಜನಾಂಗೀಯ ಸಮತೋಲನವನ್ನು ವ್ಯವಸ್ಥಿತವಾಗಿ ಬದಲಾಯಿಸಿದೆ. ವಲಸೆ ಬಂದ ಪಾಕಿಸ್ತಾನಿ ಮೂಲದ ಸುನ್ನಿ ಮುಸ್ಲಿಂ ಜನರು ಇಲ್ಲಿನ ಆರ್ಥಿಕ ಸಾಮಾಜಿಕ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದಾರೆ. ಗ್ವದರ್ ಬಂದರು ತಲುಪುವ ಮ್ಯಾರಿಟೈಮ್ ಸಿಲ್ಕ್ ಮಾರ್ಗ ಗಿಲ್ಗಿಟ್ ಮೂಲಕವೇ ಹಾದುಹೋಗುತ್ತದೆ. ರಸ್ತೆ ರೇಲ್ವೆ ಮಾರ್ಗ ಮೊದಲಾದ ಸೌಕರ್ಯಗಳ ಅಭಿವೃದ್ಧಿಯ ನೆಪದಲ್ಲಿ ಬಂದುಸೇರಿರುವ ಚೀನಿಯರಿಂದಲೂ ಸಾಕಷ್ಟು ಸಮಸ್ಯೆಗಳು ಬಂದೊದಗಿವೆ. ಪಾಕಿಸ್ತಾನದ ದೌರ್ಜನ್ಯದಿಂದ ಬೇಸತ್ತಿರುವ ಇಲ್ಲಿನ ಜನ ಭಾರತಕ್ಕೆ ಸೇರಲು ಉತ್ಸುಕರಾಗಿದ್ದಾರೆ.

## ಸ್ವತಂತ್ರವಾಗಲಿ ಬಲೂಚಿಸ್ತಾನ

"ಬಲೂಚಿಸ್ತಾನದಲ್ಲಿ ಅಸಂಖ್ಯಾತ ಸೋದರರು ಕಣ್ಮರೆಯಾಗಿದ್ದಾರೆ; ಕಣ್ಮರೆಯಾದ ತಮ್ಮ ಸೋದರರು ತಿರುಗಿ ಬರಲೆಂದು ಸೋದರಿಯರು ಕಾದಿದ್ದಾರೆ. ಆದರೆ ಅವರು ತಿರುಗಿ ಬರದೇ ಇರುವ ಸಂಭವವೇ ಹೆಚ್ಚು, ಅವರ ಸೋದರಿಯರು ಕೊನೆಯವರೆಗೆ ಕಾಯುತ್ತಲೇ ಇರಬೇಕಾಗಬಹುದು. ನಿಮ್ಮನ್ನು ನಮ್ಮ ಸಹೋದರ ಎಂದು ಭಾವಿಸಿ ಕೇಳಿಕೊಳ್ಳುತ್ತಿದ್ದೇವೆ, ಬಲೂಚಿಸ್ತಾನದಲ್ಲಿ ನಡೆಯುತ್ತಿರುವ ನರಹತ್ಯೆ ಮತ್ತು ಅಮಾನವೀಯ ಹಿಂಸೆಯ ಕುರಿತು ವಿಶ್ವದ ವೇದಿಕೆಯಲ್ಲಿ ಮಾತನಾಡಿ. ಬಲೂಚ್‌ನ ಸೋದರಿಯರ ದನಿ ನೀಡಿ. ನಮ್ಮ ಹೋರಾಟವನ್ನು ನಾವೇ ಮುನ್ನಡೆಸುತ್ತೇವೆ. ನೀವು ಕೇವಲ ನಮ್ಮ ದನಿಯಾಗಿ" – ಇದು ಬಲೂಚಿಸ್ತಾನ ವಿಮೋಚನೆಗಾಗಿ ಹೋರಾಡುತ್ತಿರುವ ಬಲೂಚ್ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕರಿಮಾ ಬಲೂಚ್ ಭಾರತದ




## ಪಾಕ್ ಆಕ್ರಮಿತ ಕಾಶ್ಮೀರ ಭಾರತದಲ್ಲಿ ವಿಲೀನವಾಗಬೇಕು

ಜಮ್ಮು–ಕಾಶ್ಮೀರ ರಾಜ್ಯದ 85 ಸಾವಿರ ಚದರ ಕಿಮೀ ಪ್ರದೇಶವನ್ನು ಪಾಕಿಸ್ತಾನ ಆಕ್ರಮಿಸಿಕೊಂಡಿದೆ. ಇದರಲ್ಲಿ 5 ಸಾವಿರ ಚ ಕಿಮೀ ವ್ಯಾಪ್ತಿಯ ಶಕ್ಸ್‌ಗಾಮ್ ಕಣಿವೆ ಪ್ರದೇಶವನ್ನು ಚೀನಾಕ್ಕೆ ಉಡುಗೊರೆ ನೀಡಿದೆ.


ಭಯೋತ್ಪಾದನೆಯ ಮೂಲಕ ಭಾರತದ ವಿರುದ್ಧ ಯುದ್ಧ ಸಾರಿರುವ ಪಾಕಿಸ್ತಾನ ಉಗ್ರಗಾಮಿಗಳ ರಫ್ತು ಕೇಂದ್ರವಾಗಿದೆ ಪಾಕ್ ಆಕ್ರಮಿತ ಕಾಶ್ಮೀರ. ಆಜಾದ್ ಕಾಶ್ಮೀರ ಎಂದು ಕರೆದು ಇಲ್ಲೊಂದು ಸರ್ಕಾರವನ್ನು ಸ್ಥಾಪಿಸಿದ್ದರೂ ಈ ಪ್ರದೇಶ ಸಂಪೂರ್ಣ ಪಾಕ್‌ನ ನಿಯಂತ್ರಣದಲ್ಲೇ ಇದೆ. ಆದರೆ ಪಾಕಿಸ್ತಾನದ ದಮನಕ್ಕೊಳಗಾದ ಈ ಪ್ರದೇಶ ಮೂಲಭೂತ ಸೌಕರ್ಯಗಳೂ ಸಿಗದಷ್ಟು ಹಿಂದುಳಿದಿದೆ. ಸಹಜವಾಗಿ ಜನರಲ್ಲಿ ಪಾಕ್ ವಿರೋಧಿ ಮಾನಸಿಕತೆಯು ನಿರ್ಮಾಣವಾಗುತ್ತಿದ್ದು ಪಾಕಿಸ್ತಾನ ಅತಿಕ್ರಮಣದ ವಿರುದ್ಧ ಜನಾಂದೋಲನ ರೂಪುಗೊಳ್ಳುತ್ತಿದೆ. ಜನರು ಭಾರತದಲ್ಲಿ ವಿಲೀನವಾಗಲು ಬಯಸುತ್ತಿದ್ದಾರೆ.

ಪ್ರಧಾನಿ ಮೋದಿಯವರಿಗೆ ರಕ್ಷಾಬಂಧನದ ಶುಭಕೋರಿ ಸಾಮಾಜಿಕ ಜಾಲತಾಣದಲ್ಲಿ ಕಳುಹಿಸಿದ ವೀಡಿಯೋ ಸಂದೇಶ. ಬಲೂಚಿಸ್ತಾನ 1947ರಲ್ಲಿ ಭಾರತ ಸೇರಲು ಬಲೂಚಿಸ್ತಾನದ ಜನರು ಉತ್ಸುಕರಾಗಿದ್ದರೂ ಚೀಫ್ ಕಮಿಷ್ನರ್ ಬಲೂಚ್ ಪ್ರಾಂತವನ್ನು ಪಾಕಿಸ್ತಾನಕ್ಕೆ ಸೇರಿಸಿದನು. ತದನಂತರ ಸುತ್ತಲಿನ ರಾಜಾಡಳಿತ ಪ್ರದೇಶಗಳು ಪಾಕಿಸ್ತಾನ ಸೇರಿದವು. ಪಾಕಿಸ್ತಾನದ ಒಟ್ಟು ವಿಸ್ತೀರ್ಣದ 44% ಪ್ರದೇಶವನ್ನು ಒಳಗೊಂಡ ಬಲೂಚಿಸ್ತಾನ ಅತಿದೊಡ್ಡ ರಾಜ್ಯವಾಗಿದೆ. ಆದರೆ ಕೇವಲ 6.8% ಜನಸಂಖ್ಯೆ. ಮೂಲತಃ ಬಲೂಚ್, ಪಶ್ತುನ್, ಬ್ರಾಹೂಯಿ, ಹಝಾರಾ ಮುಂತಾದ ಷಿಯಾ ಸಂಪ್ರದಾಯದ ಬುಡಕಟ್ಟು ಜನರು ಇಲ್ಲಿನ ವಾಸಿಗಳು. ಪಾಕಿಸ್ತಾನದ ಖನಿಜ, ಪೆಟ್ರೋಲಿಯಂ, ಕಲ್ಲಿದ್ದಲು ನಿಕ್ಷೇಪದ ಆಗರ ಬಲೂಚಿಸ್ತಾನ. ಓಮಾನ್‌ನಿಂದ 1958ರಲ್ಲಿ ಖರೀದಿಸಿದ ಗ್ವಾದರ್ ಬಂದರು ಈ ಪ್ರಾಂತದಲ್ಲಿದೆ. ಗ್ವಾದರ್ ಬಂದರನ್ನು ಸಂಪರ್ಕಿಸುವ 46 ಬಿಲಿಯನ್ ಡಾಲರ್ ಹೂಡಿಕೆಯ ಚೀನಾ ಪಾಕಿಸ್ತಾನ ಎಕಾನಾಮಿಕ್ ಕಾರಿಡಾರ್ ಬಲೂಚಿಸ್ತಾನದ ಮೂಲಕವೇ ಹಾದುಹೋಗುವುದು. ಆದರೂ ಇದು ಪಾಕಿಸ್ತಾನದ ಅತ್ಯಂತ ಬಡ ಪ್ರದೇಶ. ಇಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆದಿರುವ ಪಾಕಿಸ್ತಾನ ಸೇನೆಯ ದಬ್ಬಾಳಿಕೆಯಿಂದ ಜನರ ಹೋರಾಟವನ್ನು ಹತ್ತಿಕ್ಕಿದೆ. ಕಳೆದ ಎಪ್ಪತ್ತು ವರ್ಷಗಳಲ್ಲಿ ನಾಲ್ಕು ಬಾರಿ ತೀವ್ರ ಬಂಡಾಯವೆದ್ದಿತ್ತು.

ಇತ್ತೀಚೆಗೆ ಪರ್ವೇಜ್ ಮುಷರಫ್ ಅಧಿಕಾರದ ಚುಕ್ಕಾಣಿ ಹಿಡಿದಾಗ ಬಂಡಾಯವನ್ನು ಖಡಕ್ಕಾಗಿ ಹತ್ತಿಕ್ಕಲಾಯಿತು. ಬಲೂಚ್ ನಾಯಕ ಬುಗುಟಿ ಸೇರಿದಂತೆ ಅನೇಕರನ್ನು ಸೇನೆ ಹತ್ಯೆಗೈದಿತು. 2006ರಿಂದ ಈಚೆಗೆ 4 ಸಾವಿರಕ್ಕೂ ಹೆಚ್ಚು ಜನರು ಕಣ್ಮರೆಯಾದರು. ಸುನ್ನಿ ಮುಸ್ಲಿಂ ಜಿಹಾದಿ ಭಯೋತ್ಪಾದನೆಯ ಗುರಿಯಾಗಿದೆ ಬಲೂಚಿಸ್ತಾನ. ಕಳೆದ ಏಳು ದಶಕಗಳಲ್ಲಿ ಉಳಿದ ಪ್ರದೇಶದ ಸುನ್ನಿ ಮುಸ್ಲಿಂರನ್ನು ನೆಲೆಗೊಳಿಸಿ ಇಲ್ಲಿನ ಜನಸಂಖ್ಯಾ ಸಮತೋಲನವನ್ನು ಬದಲಾಯಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಲಾಗಿದೆ. ಯಾವುದೇ ವಿದೇಶಿ ಪತ್ರಕರ್ತನಿಗೂ ಇಲ್ಲಿ ಪ್ರವೇಶ ಸಿಗುವುದು ಅಸಂಭವ. ಹೊರಜಗತ್ತಿಗೆ ಇಲ್ಲಿ ಏನಾಗುತ್ತಿದೆ ಎನ್ನುವ ಮಾಹಿತಿಯೇ ಸಿಗಲಾರದು. ಕೆಲ ವರ್ಷಗಳ ಹಿಂದೆ ಒಂದಿಷ್ಟು ಪತ್ರಕರ್ತರೇ ಕಿಡ್ನಾಪ್ ಆಗಿದ್ದರು. ಇತ್ತೀಚೆಗೆ (ಆಗಸ್ಟ್ 7ರಂದು) ರಾಜಧಾನಿ ಕ್ವೆಟ್ಟಾದಲ್ಲಿ ನಡೆದ ಬಾಂಬ್ ವಿಸ್ಫೋಟದಲ್ಲಿ 60ಕ್ಕೂ ಹೆಚ್ಚು ಜನರು ಮೃತರಾದರು. ಇದೇ ತಿಂಗಳಿನಲ್ಲಿ ಸ್ಥಳೀಯ ವಕೀಲರೊಬ್ಬರನ್ನು ಹತ್ಯೆ ಮಾಡಲಾಯಿತು, ಆ ವಕೀಲರ ಶ್ರದ್ಧಾಂಜಲಿ ಸಲ್ಲಿಸುವ ಸಭೆ ಸೇರಿದ್ದಾಗ ನಡೆದ ಬಾಂಬ್ ಸ್ಫೋಟದಲ್ಲಿ 30ಕ್ಕೂ ಹೆಚ್ಚು ಹಿರಿಯ ವಕೀಲರು ಸತ್ತರು, ಇದರೊಂದಿಗೆ ಕ್ವೆಟ್ಟಾದ ಹಿರಿಯ ವಕೀಲರ ಒಂದು ಪೀಳಿಗೆಯನ್ನೇ ಸಾಯಿಸಲಾಯಿತು. ಇವೆಲ್ಲದರ ಹಿಂದೆ ಪಾಕಿಸ್ತಾನಿ ಸೇನೆ ಹಾಗೂ ಸರ್ಕಾರದ ದಬ್ಬಾಳಿಕೆಯಿದೆ. ಬಲೂಚ್ ಮೂಲದ ಅನೇಕ ಹೋರಾಟಗಾರರು ವಿದೇಶಗಳಲ್ಲಿ ಆಶ್ರಯ ಪಡೆದು ಸ್ವಾತಂತ್ರ್ಯ ಹೋರಾಟವನ್ನು ನಡೆಸಿದ್ದಾರೆ. ಭಾರತ ಅವರ ಹೋರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು ಸಹಜವಾಗಿ ನೈತಿಕ ಸ್ಥೈರ್ಯವನ್ನು ನೀಡಿದೆ.

ಸನಾತನ ಕಾಲದಿಂದಲೂ ವಿಶ್ವಶಾಂತಿಯನ್ನು ಪ್ರತಿಪಾದಿಸಿಕೊಂಡು ಬಂದ ದೇಶ ಭಾರತ. ಹಾಗೆಯೆ ಎಲ್ಲಿಯೇ ಮಾನವ ಜನಾಂಗದ ಮೇಲೆ ದೌರ್ಜನ್ಯ ನಡೆದರೂ ಭಾರತ ಸ್ಪಂದಿಸಿದೆ. ಆದ್ದರಿಂದ ಬಲೂಚಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದ ಜನರ ಮೇಲೆ ದೌರ್ಜನ್ಯ ನಡೆದಿರುವಾಗ ಅವರಿಗೆ ಅದನ್ನು ಪ್ರತಿಭಟಿಸುವುದು ಸ್ಥಳೀಯ ಜನರ ಹೋರಾಟಕ್ಕೆ ಸ್ಪಂದಿಸುವುದು ಭಾರತದ ಕರ್ತವ್ಯವಾಗಿದೆ.

## ಅಕ್ಷರಧಾಮ ಸೇರಿ 1000 ದೇಗುಲಗಳ ನಿರ್ಮಾತೃ ನಿಧನ



ಅಕ್ಷರಧಾಮ ಸೇರಿ, ವಿಶ್ವಾದ್ಯಂತ 1000 ಕ್ಕೂ ಹೆಚ್ಚು ದೇಗುಲಗಳನ್ನು ನಿರ್ಮಿಸಿದ್ದ ಸ್ವಾಮಿನಾರಾಯಣ ಪಂಥದ ಸ್ವಾಮಿ ಪ್ರಮುಖ್ ಮಹರಾಜ್ ಅವರು ಇತ್ತೀಚೆಗೆ ವಿಧಿವಶರಾದರು. 95 ವರ್ಷದ ಪ್ರಮುಖ್ ಸ್ವಾಮೀಜಿ ಸ್ವಾಮಿನಾರಾಯಣ ಪಂಥದ ಪ್ರಮುಖರಾಗಿದ್ದರು. ಅವರು ದಿಲ್ಲಿ, ಗಾಂಧಿನಗರ ಮತ್ತು ಅಮೆರಿಕದ ಅಟ್ಲಾಂಟಾದಲ್ಲಿರುವ ಜಗದ್ವಿಖ್ಯಾತ ಅಕ್ಷರಧಾಮ ಸೇರಿದಂತೆ ದೇಶ-ವಿದೇಶಗಳಲ್ಲಿ 1000ಕ್ಕೂ ಹೆಚ್ಚು ಸ್ವಾಮಿನಾರಾಯಣ ದೇಗುಲಗಳ ನಿರ್ಮಾಣಕ್ಕೆ ವಿಶೇಷ ಮುತುವರ್ಜಿ ವಹಿಸಿದ್ದರು. ಸ್ವಾಮಿನಾರಾಯಣ ಪಂಥದ ಉಪಪಂಥವಾದ ಬೋಚಸಾನ್ವಾಸಿ ಅಕ್ಷರ ಪುರುಷೋತ್ತಮ ಸಂಸ್ಥಾ (ಬಾಪ್ಸ್) ಸಂಸ್ಥೆಯ ಅಧ್ಯಕ್ಷರಾಗಿದ್ದ ಅವರು 1940ರಿಂದಲೇ ಅಧ್ಯಾತ್ಮಿಕ ಪಯಣ ಆರಂಭಿಸಿದ್ದರು. ಸಾಕಷ್ಟು ಧರ್ಮ ಕಾರ್ಯಗಳಿಗೆ ಹೆಸರುವಾಸಿಯಾಗಿದ್ದ ಅವರನ್ನು ಅನುಯಾಯಿಗಳು ಸ್ವಾಮಿನಾರಾಯಣನ ಅವತಾರವೆಂದೇ ಭಾವಿಸಿದ್ದರು. ಗುರುಕುಲಗಳು, ಶಾಲೆಗಳು, ನಿರ್ಗತಿಕರಿಗೆ ಆಶ್ರಯತಾಣಗಳನ್ನು ಬಾಪ್ಸ್ ಸಂಸ್ಥೆ ನಿರ್ಮಿಸಿದೆ. ಪ್ರಮುಖ್ ಸ್ವಾಮಿಗಳು 1000 ಸಂತರು ಮತ್ತು 50 ಸಾವಿರ ಸ್ವಯಂಸೇವಕರ ಪಡೆ ರಚಿಸಿದ್ದು, ವಿಶ್ವಾದ್ಯಂತ ಸ್ವಾಮಿನಾರಾಯಣ ಪಂಥದ ಕಾರ್ಯಕ್ರಮಗಳನ್ನು ನೋಡಿಕೊಳ್ಳುತ್ತಾರೆ.

## ಟೆಕ್ಕಿಗಳ ಸಾವಯವ ಸಾಹಸ




ಬೆಂಗಳೂರಿನ ಟೆಕ್ಕಿಗಳು ಒಂದಿಲ್ಲೊಂದು ಸಾಹಸಕ್ಕೆ ಕೈಹಾಕುತ್ತಲೇ ಇರುತ್ತಾರೆ. ಒಬ್ಬೊಬ್ಬರದ್ದು ಒಂದೊಂದು ಹವ್ಯಾಸ, ಸಾಹಸ. ಇಂತಹ ಟೆಕ್ಕಿಗಳ ಪೈಕಿ ನಾಗರಾಜ ಮತ್ತು ಅವರ ಪತ್ನಿ ಸಿರಿಶಾ ಅವರದ್ದು ಸಾವಯವ ಕೃಷಿ ಮಾಡುವ ಸಾಹಸ. ಕಳೆದ ವರ್ಷ ಅರೆಕಾಲಿಕವಾಗಿ ಸಾವಯವ ತರಕಾರಿ ಕೃಷಿಗಾಗಿ ಜಮೀನಿಗಿಳಿದ ಅವರಿಗೆ ಮೊದಲ ಪ್ರಯತ್ನದಲ್ಲೇ ಯಶ ಸಿಕ್ಕಿತು. ಹೀಗಾಗಿ ಈ ವರ್ಷವೂ ಸಾವಯವ ತರಕಾರಿ ಕೃಷಿ ಮುಂದುವರಿಸಿದ್ದಾರೆ. ಅವರ ಯಶೋಗಾಥೆ ವಿವರ ಹೀಗಿದೆ:

ವಾರದ ಐದು ದಿನ ಸಾಫ್ಟ್‌ವೇರ್ ಕೆಲಸ. ವಾರಾಂತ್ಯದಲ್ಲಿ ತರಕಾರಿ ಕೃಷಿ ಮಾಡುವ ನಾಗರಾಜ್ ಅವರದೇ ಮಾತುಗಳಲ್ಲಿ ಹೇಳುವುದಾದರೆ, 'ಕಳೆದ ವರ್ಷ ಜನವರಿಯಲ್ಲಿ ಬೆಂಗಳೂರಿನ ಹೊರ ವಲಯದಲ್ಲಿರುವ ಹೆಸರಘಟ್ಟದ ಈಶ್ವರ ಫಾರ್ಮರ್‌ನ ನಾಲ್ಕು ಎಕರೆ ಜಮೀನಿನಲ್ಲಿ ಒಂದು ಎಕರೆಯನ್ನು ತರಕಾರಿ ಕೃಷಿಗೆ ಬಳಸಿಕೊಂಡೆವು. ಬೀನ್ಸ್, ಬೆಂಡೆ, ಕಾಲಿಫ್ಲವರ್, ಹೀರೇಕಾಯಿ ಮುಂತಾದ ತರಕಾರಿಗಳನ್ನು ಸಾವಯವ ಮಾದರಿಯಲ್ಲಿ ಬೆಳೆದವು. ಇದಕ್ಕೆ ಕೃಷಿ ಜೀವಾಮೃತ ಗೊಬ್ಬರ ಬಳಸಿದ್ದೆವು. ಇಕೋ ಕಂಪನಿ ಕ್ಷೇತ್ರಾಧಿಕಾರಿ ಶೇಷಗಿರಿ ಗುಬ್ಬಿ ಅವರು ಹೊಲದಲ್ಲೇ ಉತ್ತಮ ಕಂಪೋಸ್ಟ್ ಮಾಡುವ ಕುರಿತು ಮಾರ್ಗದರ್ಶನ ನೀಡಿದ್ದರು. ಒಂದು ಎಕರೆ ತರಕಾರಿ ಕೃಷಿಗೆ 40 ಕಿಲೋ ಧಾರಾಮೃತ ಗೊಬ್ಬರ ಉಣಿಸಿದ್ದೇವೆ. ಕೀಟನಾಶಕವಾಗಿ ಸಾವಯವ ದ್ರವವನ್ನೇ ಬಳಸಿದ್ದೆವು. ಹೆಚ್ಚಿನ ರೋಗಬಾಧೆ ಏನೂ ಕಾಣಿಸಿರಲಿಲ್ಲ. ತರಕಾರಿ ಕೃಷಿಗೆ ಬಂಡವಾಳವಾಗಿ 20,000 ರೂಪಾಯಿ ಖರ್ಚುಮಾಡಿದ್ದೆವು. ಕಳೆದೊಂದು ವರ್ಷದಲ್ಲಿ ಐದು ಬಾರಿ ತರಕಾರಿ ಕೊಯ್ಲು ಮಾಡಿದ್ದೇವೆ. ಪ್ರತಿ ಬಾರಿ ಎಂಟು ಟನ್ ತರಕಾರಿ ಸಿಕ್ಕಿತ್ತು. ಈ ವಿಷ ರಹಿತ ಸಾವಯವ ತರಕಾರಿಗೆ ವಿದ್ಯಾರಣ್ಯಪುರದ ಅಪಾರ್ಟ್‌ಮೆಂಟ್ ನಿವಾಸಿಗಳೇ ಗ್ರಾಹಕರು. ಹಾಪ್‌ಕಾಮ್ಸ್ ದರದಲ್ಲಿ ಅದನ್ನು ಅವರಿಗೆ ಮಾರಾಟ ಮಾಡಿದ್ದೆವು. ಒಂದು ಲಕ್ಷ ರೂಪಾಯಿ ಆದಾಯ ಲಭಿಸಿದೆ. ಮಾರಾಟಕ್ಕಾಗಿ ವಾಟ್ಸ್‌ಆಪ್ ಗುಂಪನ್ನೂ ರಚಿಸಿಕೊಂಡಿದ್ದು, ಅದರ ಮೂಲಕವೇ ಎಲ್ಲರಿಗೂ ಲಭ್ಯ ತರಕಾರಿಗಳ ವಿವರವನ್ನು ತಲುಪಿಸುತ್ತೇವೆ. ಮುಂದಿನ ದಿನಗಳಲ್ಲಿ ಉಳಿದ ಜಮೀನಿನಲ್ಲೂ ತರಕಾರಿ ಕೃಷಿ ಮಾಡುವ ಕುರಿತು ಚಿಂತನೆ ನಡೆಸಿದ್ದೇವೆ'.

ಒಟ್ಟಿನಲ್ಲಿ ನಗರವಾಸಿಗಳೂ ಮನಸ್ಸು ಮಾಡಿದರೆ ಕೃಷಿ ಕ್ಷೇತ್ರದಲ್ಲಿ ವ್ಯವಸ್ಥಿತವಾಗಿ ಒಂದಷ್ಟು ಸಾಧನೆ ಮಾಡಬಲ್ಲರು ಎಂಬುದಕ್ಕೆ ಇದು ನಿದರ್ಶನ.

ಕೃಪೆ: ವಿಜಯವಾಣಿ

## ಆನ್-ಲೈನ್ ಸುರಕ್ಷತೆ




ನೀವು ಭಾರೀ ಮೊತ್ತದ ಲಾಟರಿ ಗೆದ್ದಿದ್ದೀರಿ, ಇದಕ್ಕಾಗಿ ನಿಮ್ಮ ಮೊಬೈಲ್, ಮತ್ತಿತರ ವಿವರಗಳನ್ನು ನಮಗೆ ಕಳುಹಿಸಿ; ರವಾನೆ ಖರ್ಚಿಗಾಗಿ ನಮ್ಮ ಖಾತೆಗೆ ಹಣ ಪಾವತಿಸಿ – ಇತ್ಯಾದಿ ಇಮೈಲುಗಳು ನಿಮಗೂ ಬಂದಿರಬಹುದು. ನಿಮ್ಮನ್ನ ನಂಬಿಸಿ ಮೋಸ ಮಾಡುವ ಹಲವರು ಮೊಬೈಲ್ ಮತ್ತು ಇಂಟರ್ನೆಟ್ ಬಳಸಿ ತಮ್ಮ ಬೇಳೆ ಬೇಯಿಸಿ ಕೊಳ್ಳುತ್ತಿರುತ್ತಾರೆ. ಇಂತಹ ಕರೆ ಅಥವಾ ಸಂದೇಶಗಳಿಗೆ ಮರುಳಾಗದೆ ಎಚ್ಚರದಲ್ಲಿರುವುದು ಮೊಬೈಲ್ ಯುಗದಲ್ಲಿ ಅತ್ಯವಶ್ಯಕ.

ನಿಮ್ಮ ಬ್ಯಾಂಕ್ ಖಾತೆಯ ಧೃಢೀಕರಣಕ್ಕಾಗಿ ನಿಮ್ಮ ಪಿನ್, ಕಾರ್ಡ್ ಸಂಖ್ಯೆ, ಪಾಸ್-ವರ್ಡ್ ಇತ್ಯಾದಿ ಕಳುಹಿಸಿ ಎಂದು ನಿಮ್ಮನ್ನು ನಂಬಿಸಬಹುದು. ಯಾವುದೇ ಬ್ಯಾಂಕ್ ಈ ರೀತಿಯ ವಿವರಗಳನ್ನು ನಿಮ್ಮಿಂದ ಕೇಳುವುದಿಲ್ಲ ಎಂಬುದನ್ನು ಗಮನದಲ್ಲಿರಿಸಿ.

ಫೇಸ್-ಬುಕ್, ವಾಟ್ಸಾಪ್‌ಗಳಲ್ಲಿ ಬಂದ ಒಂದು ಲಿಂಕ್ ಆಕರ್ಷಕ ಚಿತ್ರ/ಆಸಕ್ತಿದಾಯಕ ಮಾಹಿತಿ/ಉಚಿತ ಕೊಡುಗೆಗಳ ಆಮಿಷವೊಡ್ಡಿ ನೀವು ಅಸುರಕ್ಷಿತ ಲಿಂಕ್ ಮೇಲೆ ಕ್ಲಿಕ್ಕಿಸುವಂತೆ ಮಾಡಬಹುದು. ಅಲ್ಲಿ ಫೇಸ್‌ಬುಕ್‌ನಂತೆಯೇ ಕಾಣುವ ವಿನ್ಯಾಸ, ಪುಟದ ಹೆಸರುಗಳ ಮೂಲಕ ನಿಮ್ಮನ್ನ ದಾರಿತಪ್ಪಿಸಿ ನಿಮ್ಮ ಪಾಸ್‌ವರ್ಡ್ ಬರೆಯಲು ಕೇಳಬಹುದು. ನೀವೇನಾದರೂ ಆ ಮೋಸವನ್ನು ತಿಳಿಯದೆ ಅಲ್ಲಿ ನಿಮ್ಮ ಪಾಸ್‌ವರ್ಡ್ ಕೊಟ್ಟರೆ ನಿಮ್ಮ ಖಾತೆಯ ಪೂರ್ಣ ನಿಯಂತ್ರಣ ಅವರ ಕೈಸೇರುತ್ತದೆ. ಇಂತಹ ಲಿಂಕುಗಳು ನಿಮ್ಮ ಸ್ನೇಹಿತರಿಂದಲೇ ಬಂದರೂ ನಂಬಬೇಡಿ ಅವರ ಖಾತೆಯೂ ಈ ಖದೀಮರ ನಿಯಂತ್ರಣಕ್ಕೆ ಸೇರಿರುವ ಸಾಧ್ಯತೆಯಿದೆ.

ಯಾವುದೇ ಖಾತೆಯ ಪಾಸ್‌ವರ್ಡ್ ಅನ್ನು ಅವರದಲ್ಲದ ತಾಣದಲ್ಲಿ ನೀಡಬೇಡಿ; ವಿನ್ಯಾಸ, ಹೆಸರುಗಳ ಸಾಮ್ಯತೆ ಇದ್ದರೂ ಕೂಡ. ಉದಾಹರಣೆಗೆ facebook.com ಬದಲಿಗೆ facedook.com ಅಥವಾ facebook.com-secure.com ಎಂಬ ವಿಳಾಸದಲ್ಲಿ ಇನ್ನೊಂದು ತಾಣ ರಚಿಸಿ ನಿಮ್ಮ ದಾರಿ ತಪ್ಪಿಸಬಹುದು.

ನಿಮ್ಮ ವಾಟ್ಸ್‌ಆಪ್ ಖಾತೆಯನ್ನು ಮುಂದುವರೆಸಲು/ನೀವು ವಾಟ್ಸ್-ಆಪ್ ಬಳಸುತ್ತೀರೆಂದು ಖಚಿತಪಡಿಸಿಕೊಳ್ಳಲು/ನೀಲಿ ಚುಕ್ಕೆ ಪಡೆಯಲು/ಹೊಸ ಸೌಲಭ್ಯ ಪಡೆಯಲು ಒಂದು ಸಂದೇಶವನ್ನು ಎಲ್ಲಾ ಸ್ನೇಹಿತರಿಗೂ ಕಳಿಸಿ ಎಂದು ಸಂದೇಶ ಬರಬಹುದು. ಅವುಗಳನ್ನು ನಂಬಬೇಡಿ. ಎಲ್ಲರಿಗೂ ಕಳಿಸಿ/ಅದರಲ್ಲಿ ಬಂದ ಲಿಂಕ್ ಬಳಸಿರೆಂದು ವಾಟ್ಸಾಪ್ ಆಗಲಿ, ಸಾಮಾಜಿಕ ತಾಣಗಳಾಗಲಿ ಹೇಳುವುದಿಲ್ಲ. ಅಗತ್ಯವಿದ್ದರೆ ಅವರೇ ನಿಮಗೆ ಸಂದೇಶವನ್ನು ಕಳಿಸಬಹುದು, ಇನ್ಯಾರ ಮೂಲಕವೋ ಕಳಿಸಬೇಕಾಗಿಲ್ಲ.

ನೀವು ಆನ್‌ಲೈನ್ ಬ್ಯಾಂಕಿಂಗ್ ಇರಲಿ, ಇನ್ನಿತರ ಮಹತ್ವದ ವ್ಯವಹಾರಗಳನ್ನು ನಡೆಸುವಾಗ ಅವರು ಸುರಕ್ಷತೆಗಾಗಿ ನಿಮ್ಮ ಮೊಬೈಲಿಗೆ ಸಂಕೇತವೊಂದನ್ನು ಕಳುಹಿಸಬಹುದು. ಇದನ್ನು ಕಳುಹಿಸಿದ ಬ್ಯಾಂಕ್/ಸಂಸ್ಥೆಯ ಅಧಿಕೃತ ಜಾಲತಾಣ/ಆಪ್ ಅಲ್ಲದೆ ಇನ್ನೆಲ್ಲಿಯೂ ನೀಡಬೇಡಿ. ಬ್ಯಾಂಕ್ ಹೆಸರಿನಲ್ಲಿ ನಿಮಗೆ ಯಾರಾದರೂ ಕರೆಮಾಡಿ ಆ ಗುಪ್ತಸಂಖ್ಯೆಯನ್ನು ಕೇಳಿದರೆ ಕೂಡ.

ಬಳಕೆದಾರರು ಈ ವಿಚಾರಗಳ ಬಗ್ಗೆ ಹೆಚ್ಚು ತಿಳಿದು, ಅರ್ಥಮಾಡಿಕೊಂಡಷ್ಟೂ ಅಂತರ್ಜಾಲ ಸುರಕ್ಷಿತವಾಗುತ್ತಾ ಸಾಗುತ್ತದೆ. ನಿಮ್ಮ ಗೆಳೆಯರಿಂದ ಸಂಶಯಾಸ್ಪದ ಸಂದೇಶ, ಫೇಸ್‌ಬುಕ್ ಪೋಸ್ಟ್, ಮೈಲ್ ಇತ್ಯಾದಿಗಳು ಕಂಡುಬಂದಲ್ಲಿ ಅವರನ್ನು ನೇರವಾಗಿ ಸಂಪರ್ಕಿಸಿ ಅವರ ಗಮನಕ್ಕೆ ತನ್ನಿ. ಅವರು ನಿಜವಾಗಿಯೂ ಅದನ್ನು ಕಳುಹಿಸಿದ್ದರೆ ಅಥವಾ ಅವರಿಗರಿವಿಲ್ಲದೆಯೇ ಅವರ ಖಾತೆಯಿಂದ ಇನ್ಯಾರೋ ಅದನ್ನು ಕಳಿಸಿದ್ದಾರೆಯೇ ತಿಳಿದುಕೊಳ್ಳಿ. ಆನ್‌ಲೈನ್ ಸುರಕ್ಷತೆಯನ್ನು ಎಲ್ಲರೂ ಕೈಜೋಡಿಸಿ ಕಾಪಾಡಿಕೊಳ್ಳಬೇಕಾಗಿದೆ.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನುಬೋಗ್, ಶ್ರೀಹರ್ಷ ಪರ್ಲ, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

# ಉಗ್ರರ ವಿರುದ್ಧದ ಹೋರಾಡಿದ ವೀರಯೋಧರಿಗೆ ಪ್ರಶಸ್ತಿ

**ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉಗ್ರರ ವಿರುದ್ಧದ ಹೋರಾಟ ನಡೆಸಿ ಹುತಾತ್ಮರಾದ ದಾದಾಗೆ ಅಶೋಕ ಚಕ್ರ ಹಾಗೂ ನಿರಂಜನ್‌ಗೆ ಶೌರ್ಯ ಚಕ್ರ ಘೋಷಿಸಿದೆ.**



**ಪಾಕ್ ಆಕ್ರಮಿತ ಕಾಶ್ಮೀರ ಪ್ರದೇಶದಿಂದ ನುಸುಳಿದ ಉಗ್ರರ ವಿರುದ್ಧದ ಹೋರಾಡಿ, ಮೂವರನ್ನು ಕೊಂದು, ಹುತಾತ್ಮರಾದ ಹವಾಲ್ದಾರ್ ಹಂಗಾಪನ್ ದಾದಾ ಅವರಿಗೆ ಅಶೋಕ ಚಕ್ರ ಘೋಷಿಸಲಾಗಿದೆ. ಯುದ್ಧವಲ್ಲದ ಸಂದರ್ಭಗಳಲ್ಲಿ ಯೋಧರು ಮೆರೆಯುವ ಶೌರ್ಯಕ್ಕೆ ನೀಡುವ ಅತ್ಯುನ್ನತ ಪದಕ ಇದು. ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ ಜಿಲ್ಲೆಯ ನೌಗಾಮ್ ವಲಯದಲ್ಲಿ ತಪ್ಪಿಸಿಕೊಂಡು ಹೋಗುತ್ತಿದ್ದ ನಾಲ್ಕು ಜನ ಭಯೋತ್ಪಾದಕರನ್ನು ಹಿಡಿಯುವ ಹೊಣೆ ದಾದಾ ಮತ್ತು ಅವರ ತಂಡದ ಮೇಲಿತ್ತು. ಮೂವರು ಭಯೋತ್ಪಾದಕರನ್ನು ಕೊಂದ ದಾದಾ, ನಾಲ್ಕನೆಯವ ಹಾರಿಸಿದ ಗುಂಡಿಗೆ ಬಲಿಯಾಗಿದ್ದರು.**



**ಪಠಾಣ್‌ಕೋಟ್ ವಾಯುನೆಲೆ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ವೇಳೆ ಹುತಾತ್ಮರಾದ, ಎನ್‌ಎಸ್‌ಜಿಯ ಬಾಂಬ್ ನಿಷ್ಕ್ರಿಯ ದಳದ ಮುಖಂಡ ಬೆಂಗಳೂರಿನ ಲೆಫ್ಟಿನೆಂಟ್ ಕರ್ನಲ್ ಇ.ಕೆ. ನಿರಂಜನ್ ಅವರಿಗೆ ಶೌರ್ಯ ಚಕ್ರ ಘೋಷಿಸಲಾಗಿದೆ. ಯುದ್ಧವಲ್ಲದ ಸಂದರ್ಭಗಳಲ್ಲಿ ಯೋಧರು ಮೆರೆಯುವ ಶೌರ್ಯಕ್ಕೆ ನೀಡುವ ಮೂರನೆಯ ಅತ್ಯುನ್ನತ ಪದಕ ಇದು. ರಕ್ಷಣಾ ಪಡೆ ಮತ್ತು ಅರೆಸೇನಾ ಪಡೆಗಳ ಒಟ್ಟು 82 ಜನರಿಗೆ ಈ ಬಾರಿಯ ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಪದಕಗಳನ್ನು ಘೋಷಿಸಿದ್ದಾರೆ. 14 ಜನರಿಗೆ ಶೌರ್ಯ ಚಕ್ರ, 63 ಜನರಿಗೆ ಸೇನಾ ಪದಕ, ತಲಾ ಇಬ್ಬರಿಗೆ ನವ (ನೌಕಾ) ಸೇನೆ ಮತ್ತು ವಾಯು ಸೇನೆ ಪದಕಗಳನ್ನು ಘೋಷಿಸಲಾಗಿದೆ.**

## ಸಾಲುದ್ದದ ಸುದ್ದಿಗಳು


ಸ್ವಾತಂತ್ರ್ಯ ಹೋರಾಟದಲ್ಲಿ ಕೆಲವು ಜನರ ಪಾತ್ರದ ಬಗ್ಗೆ ಅಗತ್ಯಕ್ಕಿಂತ ಹೆಚ್ಚಿನ ಚರ್ಚೆ ನಡೆದಿದೆ. ಆದರೆ ಬುಡಕಟ್ಟು ಜನರು ನಡೆಸಿದ ಹೋರಾಟಕ್ಕೆ ಗಮನವನ್ನೇ ನೀಡಲಾಗಿಲ್ಲ. ಹೀಗಾಗಿ ಹೆಚ್ಚು ಪ್ರಚಾರ ಪಡೆಯದ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ಕುರಿತು ಮುಂದಿನ ಜನಾಂಗಕ್ಕೆ ತಿಳಿಸುವುದಕ್ಕಾಗಿ ಹಲವು ರಾಜ್ಯಗಳಲ್ಲಿ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಕೆಂಪುಕೋಟೆಯಿಂದ ರಾಷ್ಟವನ್ನು ಉದ್ದೇಶಿಸಿ ಮಾತನಾಡುತ್ತ ತಿಳಿಸಿದರು. ಬಡತನ ರೇಖೆಗಿಂತ ಕೆಳಗಿನ(ಬಿಪಿಎಲ್) ಕುಟುಂಬಗಳ 1 ಲಕ್ಷ ವರೆಗಿನ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಹಾಗೆಯೇ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಯನ್ನು ಶೇ. 20 ರಷ್ಟು ಏರಿಸಲಾಗುವುದು. ಈಗಿರುವ 25 ಸಾವಿರ ಪಿಂಚಣಿ ಪಡೆಯನ್ನು 30 ಸಾವಿರಕ್ಕೆ ಏರಿಸಲಾಗುವುದು ಎಂದರು.

ಕಾಶ್ಮೀರದಲ್ಲಿ ಪೊಲೀಸ್ ಮತ್ತು ಸೇನಾಪಡೆಯ ಮೇಲೆ ಕಲ್ಲು ತೂರಾಟ ನಡೆಸುವವರು ಸತ್ಯಾಗ್ರಹಿಗಳಲ್ಲ, ಅವರು ಆಕ್ರಮಣಕಾರರು. ಕಾಶ್ಮೀರ ಹಿಂಸಾಚಾರದಲ್ಲಿ ಭಾಗಿಯಾಗಿರುವವರೊಂದಿಗೆ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಹೇಳಿದ್ದಾರೆ. ಜಮ್ಮು ಗ್ರಾಮಾಂತರ ಪ್ರದೇಶದಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, 1947ರಲ್ಲಿ ದೇಶ ವಿಭಜನೆಯಾದಂದಿನಿಂದ ಇಂದಿನವರೆಗೆ ನಮ್ಮ ದೇಶದ ಏಕತೆಯನ್ನು ಘಾಸಿಗೊಳಿಸಲು ಪಾಕಿಸ್ತಾನ ಯತ್ನಿಸುತ್ತಲೇ ಇದೆ. ಇದರ ಭಾಗವಾಗಿಯೇ ಕಳೆದ 44 ದಿನಗಳಿಂದ ಕಾಶ್ಮೀರದಲ್ಲಿ ಹಿಂಸಾಚಾರ ನಡೆಯುತ್ತಿದೆ. ಪ್ರತ್ಯೇಕತಾವಾದಿಗಳು, ಧರ್ಮ ಪ್ರಚೋದಕರು ಹೀಗೆ ಹಲವಾರು ಶಕ್ತಿಗಳು ಒಟ್ಟು ಸೇರಿ ದೇಶದ ಏಕತೆಯ ಮೇಲೆ ದಾಳಿ ನಡೆಸಲು ಯತ್ನಿಸುತ್ತಿದ್ದಾರೆ. ಇಂತಹ ಶಕ್ತಿಗಳನ್ನು ಹತ್ತಿಕ್ಕಲು ನಾವು ಸಿದ್ಧರಾಗಬೇಕಿದೆ. ಏಕತೆ ಮತ್ತು ರಕ್ಷಣೆಯ ವಿಷಯದಲ್ಲಿ ನಾವು ಯಾವತ್ತೂ ರಾಜಿ ಮಾಡುವುದಿಲ್ಲ ಎಂದರು.

**ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕಳೆದ 4 ವರ್ಷಗಳಲ್ಲಿ ಒಟ್ಟು 37 ಅಪರಾಧಿಗಳ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ್ದು, ಈ ಹಿಂದಿನ ಎಲ್ಲ ರಾಷ್ಟ್ರಪತಿಗಳ ದಾಖಲೆಯನ್ನೂ ಮುರಿದಿದ್ದಾರೆ. 2017ರ ಜುಲೈನಲ್ಲಿ ನಿವೃತ್ತರಾಗಲಿರುವ ಪ್ರಣಬ್, ಉಗ್ರರಾದ ಅಜ್ಮಲ್ ಕಸಬ್, ಅಫ್ಜಲ್ ಗುರು ಹಾಗೂ ಯಾಕೂಬ್ ಮೆಮನ್ ಸೇರಿ ಹಲವು ಕುಖ್ಯಾತರ ಕ್ಷಮಾದಾನ ಅರ್ಜಿ ತಿರಸ್ಕರಿಸಿದ್ದಾರೆ. 16 ವರ್ಷದ ವಿದ್ಯಾರ್ಥಿಯನ್ನು ಕ್ರೂರವಾಗಿ ಹತ್ಯೆಗೈದಿದ್ದ ಉತ್ತರಪ್ರದೇಶದ ಹೋಶಿಯಾರಪುರದ ವಿಕ್ರಮ್ ಸಿಂಗ್ ವಾಲಿಯಾ ಮತ್ತು ಜಸ್ವೀರ್ ಸಿಂಗ್ ಕ್ಷಮಾದಾನ ಅರ್ಜಿಯನ್ನು ಇತ್ತೀಚೆಗಷ್ಟೇ ತಿರಸ್ಕರಿಸಿದ್ದಾರೆ. ಕೇವಲ 2 ಪ್ರಕರಣಗಳಲ್ಲಿ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯಾಗಿ ಪ್ರಣಬ್ ಬದಲಿಸಿದ್ದಾರೆ.**

ತಂತ್ರಜ್ಞಾನ ಆಧಾರಿತ 'ಸ್ಟಾರ್ಟ್ ಅಪ್' ಉದ್ಯಮದ ಹುಟ್ಟಿನಲ್ಲಿ ವಿಶ್ವದಲ್ಲಿ ಮೂರನೇ ಸ್ಥಾನವನ್ನು ಭಾರತ ಅಲಂಕರಿಸಿದೆ. ಅಮೆರಿಕ ಮತ್ತು ಬ್ರಿಟನ್ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಹಂಚಿಕೊಂಡಿವೆ. ಅಸ್ಸೋಚಾಮ್ ಅಸೋಷಿಯೇಶನ್ ಅರ್ಬಿಟ್ರೇಜ್ ಸಂಶೋಧನಾ ಸಂಸ್ಥೆ ಜಂಟಿಯಾಗಿ ನಡೆಸಿದ ಸಮೀಕ್ಷೆಯಲ್ಲಿ ಕರ್ನಾಟಕದ ಬೆಂಗಳೂರು ದೇಶದ ಅತಿಹೆಚ್ಚು ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಅಪ್ ಪ್ರಾರಂಭಕ್ಕೆ ಸಾಕ್ಷಿಯಾಗಿದೆ. ನಂತರ ದೆಹಲಿ, ಮುಂಬೈ ಹಾಗೂ ಹೈದರಾಬಾದ್ ನಗರಗಳು ಸ್ಟಾರ್ಟ್ ಅಪ್ ಕಂಪನಿಗಳಿಗೆ ಒತ್ತು ನೀಡಿರುವ ಪ್ರದೇಶಗಳಾಗಿವೆ. ಅಮೆರಿಕದಲ್ಲಿ 47 ಸಾವಿರ ಹಾಗೂ ಬ್ರಿಟನ್‌ನಲ್ಲಿ 4,500 ಸ್ಟಾರ್ಟ್ ಅಪ್‌ಗಳಿವೆ. ತೀವ್ರ ಪೈಪೋಟಿ ನೀಡುತ್ತಿರುವ ಭಾರತದಲ್ಲಿ 4200 ತಾಂತ್ರಿಕ ಉದ್ಯಮದ ಸ್ಟಾರ್ಟ್ ಅಪ್ ಕಂಪನಿಗಳು ಉದಯಿಸಿವೆ. ತಾಂತ್ರಿಕ ಮತ್ತು ತಾಂತ್ರಿಕೇತರ ಸ್ಟಾರ್ಟ್ ಉದ್ಯಮದಲ್ಲಿಯೂ ಭಾರತ ಮೊದಲ 5 ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ನರೇಂದ್ರ ಮೋದಿ ಸರ್ಕಾರ ಭಾರತದ ಸ್ಟಾರ್ಟ್ ಅಪ್ ಉದ್ಯಮವನ್ನು ಉತ್ತೇಜಿಸಲು ವಿವಿಧ ಯೋಜನೆ, ಕ್ರಮಗಳನ್ನು ಕೈಗೊಂಡಿದೆ.

**ಕಾಶ್ಮೀರ ಕಣಿವೆಯಲ್ಲಿ ಕೆಲವರಿಂದ ದೇಶ ವಿರೋಧಿ, ಸೈನಿಕ ವಿರೋಧಿ ಹೋರಾಟ, ಘೋಷಣೆ ಕೇಳಿಬರುತ್ತಿದಿದ್ದರೂ ಸೈನ್ಯಕ್ಕೆ ಸೇರಿ ದೇಶ ಸೇವೆ ಮಾಡಬೇಕು ಎನ್ನುವ ಕಾಶ್ಮೀರಿಗರ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಆಗಸ್ಟ್ 18ರಂದು ಒಂದೇ ದಿನ 300 ಕಾಶ್ಮೀರಿ ಯುವಕರು ಸೇನೆಗೆ ಸೇರಿದ್ದಾರೆ. ಕಾಶ್ಮೀರ ಲೈಟ್ ಇನ್‌ಫೆಂಟ್ರಿ ಪಡೆಗೆ ಇವರೆಲ್ಲ ನಿಯೋಜನೆಯಾಗಿದ್ದಾರೆ.**



# ಕಣ್ಣುಗಳು ರಾಷ್ಟ್ರೀಯ ಆಸ್ತಿ!

ಭಾರತದ ನೆರೆರಾಷ್ಟ್ರ ಶ್ರೀಲಂಕಾದಲ್ಲಿ ಕಣ್ಣುಗಳನ್ನು ರಾಷ್ಟ್ರೀಯ ಆಸ್ತಿ ಎಂದು ಘೋಷಿಸಲಾಗಿದೆ. ಅಲ್ಲಿ ಸಾವಿನ ನಂತರ ನೇತ್ರದಾನವನ್ನು ಕಡ್ಡಾಯಗೊಳಿಸಲಾಗಿದೆ. ಪರಿಣಾಮವಾಗಿ ಇಡೀ ದೇಶದಲ್ಲಿ ಕಾರ್ನಿಯಾ ಅಂಧತ್ವದ ಒಂದೇ ಪ್ರಕರಣ ಕಂಡುಬರುವುದಿಲ್ಲ. ದೇಶದ ಅವಶ್ಯಕತೆ ಪೂರೈಸಿಕೊಳ್ಳುವ ಜತೆಗೆ ಯುರೋಪ್ ಮತ್ತು ಅಮೆರಿಕಕ್ಕೆ ಕಾರ್ನಿಯಾವನ್ನು ಒದಗಿಸುತ್ತ ಶ್ರೀಲಂಕಾ ಜಗತ್ತಿಗೆ ಮಾದರಿಯಾಗಿದೆ. ಆದರೆ ಅಗಾಧ ಜನಸಂಖ್ಯೆ ಹೊಂದಿರುವ ಭಾರತದಲ್ಲಿ ಸುಮಾರು 20 ಲಕ್ಷದಷ್ಟಿರುವ ಕಾರ್ನಿಯಾ ದೋಷವುಳ್ಳ ಅಂಧರು ನೇತ್ರದಾನಿಗಳ ದಾರಿ ಕಾಯುತ್ತಿದ್ದಾರೆ. ಹೀಗಾಗಿ ನಿಧನದ ಬಳಿಕ ಮಣ್ಣಲ್ಲಿ ಮಣ್ಣಾಗಿ ಅಥವಾ ಬೆಂಕಿಯಲ್ಲಿ ಸುಟ್ಟುಹೋಗುವ ನಮ್ಮ ಎರಡು ಕಣ್ಣುಗಳು ಇಬ್ಬರು ಅಂಧರ ಬಾಳನ್ನು ಬೆಳಕಾಗಿಸುವತ್ತ ನಾವು ಗಂಭೀರವಾಗಿ ಯೋಚಿಸಬೇಕಾದ ಅಗತ್ಯವಿದೆ. ಭಾರತದಲ್ಲಿ ನೇತ್ರದಾನ ಕಡ್ಡಾಯವಲ್ಲದಿದ್ದರೂ ಜಾಗೃತಿ ಮೂಲಕ ನೇತ್ರದಾನಿಗಳ ಸಂಖ್ಯೆಯನ್ನು 4ಲಕ್ಷಕ್ಕೆ ಹೆಚ್ಚಿಸಿದಲ್ಲಿ 2020ರ ವೇಳೆಗೆ ಭಾರತ ಕಾರ್ನಿಯಾ ಅಂಧತ್ವದಿಂದ ಮುಕ್ತಿ ಪಡೆಯಲಿದೆ. ಜನಜಾಗೃತಿ ಮೂಡಿಸುವ ಉದ್ದೇಶದಿಂದ ಅಂಗವಿಕಲರ ಕಲ್ಯಾಣಕ್ಕೆ ಶ್ರಮಿಸುತ್ತಿರುವ 'ಸಕ್ಷಮ' ಸಂಘಟನೆ ಆಗಸ್ಟ್ 25ರಿಂದ ಸೆಪ್ಟೆಂಬರ್ 8ರ ತನಕ ರಾಜ್ಯಾದ್ಯಂತ ಜಾಗೃತಿ ಪಾಕ್ಷಿಕ ಹಮ್ಮಿಕೊಂಡಿದೆ. ಅಭಿಯಾನದಲ್ಲಿ ನೇತ್ರ ಜಾಗೃತಿ ಜಾಥ, ಬೀದಿ ನಾಟಕ, ಶಾಲಾ–ಕಾಲೇಜುಗಳಲ್ಲಿ ಸ್ಪರ್ಧೆಗಳು, ಮಾನವ ಸರಪಳಿ, ಲೇಖನ ಪ್ರಕಟಣೆ, ಸಾಮಾಜಿಕ ಜಾಲತಾಣಗಳಲ್ಲಿ ಜಾಗೃತಿ ಸೇರಿ ಅನೇಕ ಕಾರ್ಯಕ್ರಮ ನಡೆಯಲಿವೆ. ಹೆಚ್ಚಿನ ಮಾಹಿತಿಗೆ ವಿನೋದ್ ಪ್ರಕಾಶ್ (9986699710) ಅವರನ್ನು ಸಂಪರ್ಕಿಸಿ.



# ಇಡ್ಕಿದು : ಜಲಸಾಕ್ಷರತೆಗೊಂದು ದಿಟ್ಟ ಹೆಜ್ಜೆ

**ದಕ್ಷಿಣ ಕನ್ನಡ ಜಿಲ್ಲೆಯ ಇಡ್ಕಿದು ಗ್ರಾಮ ಕೇವಲ 7,218 ಮಂದಿಯನ್ನು ಹೊಂದಿದ ಗ್ರಾಮ. ಈ ಗ್ರಾಮ ವಿವಿಧ ವಿಶೇಷತೆಗಳನ್ನೊಳಗೊಂಡಿದ್ದು, 'ಜಲ ಸಂರಕ್ಷಣೆ' ಯೋಜನೆಯ ಮೂಲಕ ಇದೀಗ ಮತ್ತೊಮ್ಮೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಗಮನ ಸೆಳೆದಿದೆ. ಇಲ್ಲಿಯ ಶೇ. 60ಕ್ಕೂ ಅಧಿಕ ರೈತರು ಭತ್ತ, ಅಡಿಕೆ, ತೆಂಗು, ಬಾಳೆ, ಕಾಳು ಮೆಣಸು ಬೆಳೆಯುತ್ತಾರೆ. ಮಾತ್ರವಲ್ಲದೇ ಹೈನುಗಾರಿಕೆಯಲ್ಲೂ ನಿರತರಾಗಿದ್ದಾರೆ. ಸ್ಥಳೀಯ ವ್ಯವಸಾಯ ಸೇವಾ ಸಹಕಾರಿ ಸಂಘ ಆರಂಭಿಸಿದ 'ಜಲ ಸಂರಕ್ಷಣೆ' ಯೋಜನೆಯ ಪರಿಣಾಮವಾಗಿ ಇಂದು ಇಲ್ಲಿಯ ಬಹುತೇಕ ಮಂದಿಯನ್ನು ಜಲ ಸಾಕ್ಷರರನ್ನಾಗಿಸಿದೆ. ಸಹಕಾರಿ ಸಂಸ್ಥೆಗಳು ಜಲ ಸಾಕ್ಷರತೆಯ ಭಾಗವಾಗಿ ನಿರಂತರ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಎಲ್ಲರೂ ತಪ್ಪದೇ ಹಾಜರಾಗುತ್ತಾರೆ. ಇದರಿಂದಾಗಿ ಜಾಗೃತಿ ಮೂಡಿದ್ದು, ಇಲ್ಲಿನ ಬಹುತೇಕ ಅಂಗನವಾಡಿ ಕೇಂದ್ರ, ಶಾಲೆ, ದೇವಸ್ಥಾನಗಳಲ್ಲಿ ಕೂಡ ಇಂಗು ಗುಂಡಿ ಪದ್ಧತಿ ಅಳವಡಿಸಿಕೊಳ್ಳಲಾಗಿದೆ.**

**ಇಡ್ಕಿದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಉದ್ಯೋಗ ಖಾತರಿ ಯೋಜನೆಯಡಿ ನಾಲ್ಕು ಸಾರ್ವಜನಿಕ ಕೊಳವೆ ಬಾವಿಗಳಿಗೆ ಜಲ ಮರುಪೂರಣ ಪದ್ಧತಿ ಅಳವಡಿಸಲಾಗಿದೆ. ಸುವರ್ಣ ಗ್ರಾಮ ಯೋಜನೆಯಡಿ ಬಹುತೇಕ ಗ್ರಾಮೀಣ ರಸ್ತೆಗಳು ಡಾಂಬರೀಕರಣಗೊಂಡಿದೆ. ಮಿತ್ತೂರು ಎಂಬಲ್ಲಿ ಘನತ್ಯಾಜ್ಯ ವಿಲೇವಾರಿಗೆ ಜಮೀನು ಮೀಸಲಿಡಲಾಗಿದೆ. ಈಗಾಗಲೇ ಕುಳ ಗ್ರಾಮದಲ್ಲಿ ಸಾರ್ವಜನಿಕ ಸ್ಮಶಾನಕ್ಕಾಗಿ ಒಟ್ಟು 1.80 ಎಕರೆ ಜಮೀನು ಮೀಸಲಿಡಲಾಗಿದ್ದು, 10 ಲಕ್ಷ ವೆಚ್ಚದಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಂಡಿದೆ.**

**ಇಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ಒಟ್ಟು 232 ಕಾಂಪೋಸ್ಟ್ ಪೈಪ್ ಅಳವಡಿಸುವ ಮೂಲಕ ನಿರ್ಮಲ ಗ್ರಾಮವಾಗಿ ರೂಪುಗೊಂಡಿದೆ. 2008ರಲ್ಲಿ ಈ ಪಂಚಾಯಿತಿಗೆ ಜಿಲ್ಲಾ ಮಟ್ಟದ ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿ ಲಭಿಸಿದೆ. ಇದೀಗ ಒಟ್ಟು 200 ಎಕರೆ ಪ್ರದೇಶದ ಅಡಿಕೆತೋಟದಲ್ಲಿ ಕೃಷಿಕರು ಹನಿ ನೀರಾವರಿ ಯೋಜನೆ ಅಳವಡಿಸಿಕೊಂಡಿದ್ದು, ನೀರಿನ ರಕ್ಷಣೆ ಮಾಡುತ್ತಿದ್ದಾರೆ. ವಿವಿಧ ಸಂಘಸಂಸ್ಥೆಗಳು ಈ ಕಾರ್ಯದೊಂದಿಗೆ ಕೈಜೋಡಿಸಿವೆ.**

ಕೃಪೆ: ಪ್ರಜಾವಾಣಿ

ಪುಂಗವ PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-9-2016



# ಉಗ್ರರಿಗೆ ಕರುಣೆ, ದೇಶವಿರೋಧಿ ಧೋರಣೆ! : ಇದು ಅಮ್ನೆಸ್ಟಿ ಬಂಡವಾಳ

**ಸೈನಿಕರ ವಿರುದ್ಧ ಘೋಷಣೆ ಕೂಗಿದ ಕೃತ್ಯಕ್ಕೆ ವೇದಿಕೆ ನಿರ್ಮಿಸಿಕೊಟ್ಟ ಅಮ್ನೆಸ್ಟಿ ಸಂಸ್ಥೆ ಈಗ ವಿವಾದದ ಕೇಂದ್ರ ಬಿಂದು. ಅಷ್ಟಕ್ಕೂ ತಾವು ವಿದ್ರೋಹಿಗಳಲ್ಲ, ದೇಶಭಕ್ತರೆಂದು ಕರೆದುಕೊಳ್ಳುವ ಈ ಸಂಘಟನೆಯ ಉದ್ದೇಶ, ಗುರಿ ಏನು? ಎಂಬ ಪ್ರಶ್ನೆಯ ಬೆನ್ನತ್ತಿ ಹೋದರೆ ಹಲವು ಅಚ್ಚರಿ ಹಾಗೂ ಆತಂಕಕಾರಿ ಸಂಗತಿಗಳು ಅನಾವರಣಗೊಳ್ಳುತ್ತಿದೆ. ಸಾಮಾಜಿಕ ಸಂಸ್ಥೆ ಎಂದು ಕರೆದುಕೊಳ್ಳುವ ಈ ಅಮ್ನೆಸ್ಟಿ ಐದಾರು ರಾಷ್ಟ್ರಗಳಲ್ಲಿ ನಿಷೇಧಕ್ಕೊಳಪಟ್ಟಿದ್ದು, ಉಗ್ರವಾದ ಪೋಷಣೆ, ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಯಲ್ಲಿ ಹೊಂದಿರುವ ಪಕ್ಷಪಾತ ಧೋರಣೆಯ ಮುಖವಾಡ ಕಳಚಿ ಬೀಳುತ್ತಿದೆ.**



ವಿದ್ರೋಹಿಗಳ ಬಂಧನಕ್ಕೆ ಆಗ್ರಹಿಸಿ ಶನಿವಾರ ಟೌನ್‌ಹಾಲ್ ಎದುರು ಸಿಟಿಜನ್ ಫಾರ್ ಡೆಮಾಕ್ರಸಿ ಕಾರ್ಯಕರ್ತರು ಮೇಣದಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

ಅಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆಯು (Amnesty International) ಇದೇ ಆಗಸ್ಟ್ 13ರಂದು ಬೆಂಗಳೂರಿನ ಯುನೈಟೆಡ್ ಥಿಯೋಲಜಿಕಲ್ ಕಾಲೇಜಿನಲ್ಲಿ 'ಮುರಿದ ಮನೆಗಳು–ನ್ಯಾಯದತ್ತ ಪಯಣ' (Broken of families–journey) ಎನ್ನುವ ಒಂದು ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಮೂರು ಕಾಶ್ಮೀರಿ ಕುಟುಂಬಗಳೊಂದಿಗೆ (ಅವೆಲ್ಲ ಮುಸ್ಲಿಂ ಕುಟುಂಬಗಳು) ಸಂವಾದ ನಡೆಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು. ಆ ಕುಟುಂಬಗಳನ್ನು ಅಮ್ನೆಸ್ಟಿ ಭಾರತೀಯ ಸೇನೆಯಿಂದ ಮಾನವ ಹಕ್ಕುಗಳ ಉಲ್ಲಂಘನೆಗೊಳಗಾದವರು ಎಂದು ಬಣ್ಣಿಸಿತ್ತು. ಬೆಂಗಳೂರಿನ ಕೆಲವು ಜಾಗೃತ ನಾಗರಿಕರು ಸಂಘಟಕರನ್ನು


ದೇಶದ್ರೋಹಿಗಳ ಬಂಧನ ಹಾಗೂ ಅಮ್ನೆಸ್ಟಿ ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಎಬಿವಿಪಿಯಿಂದ ರಾಜ್ಯಾದ್ಯಂತ ಪ್ರತಿಭಟನೆ

ಸಂಪರ್ಕಿಸಿ, ಕಾರ್ಯಕ್ರಮವು ಪಕ್ಷಪಾತದಿಂದ ಕೂಡಿದೆ ಮತ್ತು ನ್ಯಾಯಸಮ್ಮತವಾಗಿಲ್ಲ ಎಂದು ಗಮನ ಸೆಳೆದರು. ಆಗ ಅಮ್ನೆಸ್ಟಿ ಇಸ್ಲಾಮಿಕ್ ಉಗ್ರಗಾಮಿಗಳಿಂದ ಮಾನವ ಹಕ್ಕುಗಳ ಉಲ್ಲಂಘನೆಗೆ ಗುರಿಯಾದ ಕಾಶ್ಮೀರಿಪಂಡಿತ ಕುಟುಂಬಗಳನ್ನು ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲು ಸಮ್ಮತಿಸಿತು.

ಸ್ವಾಗತ ಭಾಷಣ ಮಾಡಿದ ಆ್ಯಮ್ನೆಸ್ಟಿಯ ಕಾರ್ಯಕ್ರಮ ನಿರ್ದೇಶಕಿ ತಾರಾರಾವ್ ಅವರೂ ಕಾಶ್ಮೀರಿ ಪಂಡಿತರಿಗಾದ ಸಾವು–ನೋವುಗಳ ಬಗ್ಗೆ ತಪ್ಪು ಮಾಹಿತಿ ನೀಡಿದರು. ಅದನ್ನು ಜಾಗೃತ ನಾಗರಿಕರು ಸರಿಪಡಿಸಿದರು. ಅದಾದ ಬಳಿಕ ಮೂರು ಕಾಶ್ಮೀರಿ ಮುಸ್ಲಿಂ ಕುಟುಂಬಗಳ ಅಭಿಪ್ರಾಯವನ್ನು ಒಳಗೊಂಡ ಮೂರು ವಿಡಿಯೋಗಳನ್ನು ಪ್ರದರ್ಶಿಸಲಾಯಿತು; ಆ ಕುಟುಂಬಗಳ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಲಾಯಿತು. ಆದರೆ ಜಗತ್ತು ಮೌನ ಮುರಿಯಲಿಲ್ಲ (And the world remained silent) ಎನ್ನುವ ಎಂಟು ನಿಮಿಷಗಳ ಒಂದು ವಿಡಿಯೋ ಪ್ರದರ್ಶಿಸಬೇಕೆಂದು ಕಾಶ್ಮೀರಿ ಪಂಡಿತರು ಬೇಡಿಕೆಗೆ ಸಂಘಟಕರು ಅವಕಾಶ ಕೊಡಲಿಲ್ಲ.

ಕೊನೆಗೆ ಇಸ್ಲಾಮಿಕ್ ಭಯೋತ್ಪಾದನೆಯಿಂದ ಉಂಟಾದ ಪರಿಸ್ಥಿತಿ, ಅದರ ದುರ್ಬಳಕೆ ಮಾಡಲು ವಿದೇಶೀ ಶಕ್ತಿಗಳ ಹವಣಿಕೆಯ ಕುರಿತು ಕಾಶ್ಮೀರಿ ಪಂಡಿತರ ಪ್ರತಿನಿಧಿ ಮಟ್ಟೂ ಅವರು ಚರ್ಚೆಯ ವೇಳೆ ಗಮನ ಸೆಳೆದರು. ಇದನ್ನು ಕೆಲವರು ತೀವ್ರವಾಗಿ ಆಕ್ಷೇಪಿಸಿದರು. ಆಗ ಉಂಟಾದ ಗೊಂದಲವನ್ನು ನಾಗರಿಕರು ಮತ್ತು ಪೊಲೀಸರು ತಿಳಿಗೊಳಿಸಿದರು; ಮುಗಿಯುವ ಹೊತ್ತಿಗೆ ಕೆಲವರು ದೇಶವಿರೋಧಿ ಘೋಷಣೆಗಳನ್ನು ಕೂಗಿದರು. ಅಮ್ನೆಸ್ಟಿಯವರು ಅವರನ್ನು ತಡೆಯಲಿಲ್ಲ. ಯಾವುದೇ ಕ್ರಮ ಕೈಗೊಳ್ಳಲಿಲ್ಲ!

**ಭಾರತದ ಬಗ್ಗೆ ಗೌರವವಿಲ್ಲ:** ಅಮ್ನೆಸ್ಟಿ ಸಂಸ್ಥೆ, ಭಾರತದ ಪರಮಾಧಿಕಾರವನ್ನು, ಸಂವಿಧಾನ, ಸುಪ್ರೀಂ ಕೋರ್ಟ್, ಉದಾರವಾದಿ ಸಂಸ್ಕೃತಿಯನ್ನು ಮತ್ತು ಇಲ್ಲಿನ ನಾಗರಿಕರ ಸಜ್ಜನಿಕೆಯನ್ನು ಹಿಂದೆಯೂ ಗೌರವಿಸಿರಲಿಲ್ಲ ಎಂಬುದು ಬಹಿರಂಗ ಸತ್ಯ. ಈಗಿನ ಮುಖ್ಯಸ್ಥ ಆಕಾರ್ ಪಟೇಲ್ ಅಥವಾ ಅದರ ಹಿಂದಿನ ಮುಖ್ಯಸ್ಥರು ದೇಶದಲ್ಲಿ ಇಸ್ಲಾಮಿ ಜಿಹಾದಿಗಳು ನಡೆಸಿರುವ ಮಾರಣಹೋಮದ ಬಗೆಗೆ ಚಕಾರ ಎತ್ತದಿರುವುದು, ಆಯ್ದ ಪ್ರಕರಣಗಳಲ್ಲಿ ಮಾತ್ರ ಮಾನವ ಹಕ್ಕುಗಳ ರಕ್ಷಣೆ ಬಗ್ಗೆ ಕಾಳಜಿ ತೋರಿಸಿರುವುದು ಬೆಳಕಿಗೆ ಬಂದಿದೆ. ಈ ಕುರಿತು ಈಗಿನ ಪದಾಧಿಕಾರಿಗಳ್ಯಾರೂ ಮುಕ್ತವಾಗಿ ಮಾತನಾಡುತ್ತಿಲ್ಲ. ಅಮೆರಿಕದ ಬಗೆಗೆ ಒಲವು ಹಾಗೂ ಬೌದ್ಧಿಕ ಗೊಂದಲದಿಂದ ಇರುವ ಸಂಸ್ಥೆ ಅದು ಎಂದು ವಾಲ್‌ಸ್ಟ್ರೀಟ್ ಜರ್ನಲ್ 27.02.2014ರಂದು ವರದಿ ಮಾಡಿತ್ತು. ಆತ್ಮರಕ್ಷಣೆಗಾಗಿ ಜಿಹಾದ್ ಮಾಡಬಹುದು (Jihad in self-defense) ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಪ್ರಧಾನ ಕಾರ್ಯದರ್ಶಿ ಕ್ಲಾಡಿಯೊ ಕಾರ್ಡ್‌ನ್ ನೀಡಿದ್ದ ವಿವಾದಾತ್ಮಕ ಹೇಳಿಕೆ ವೆಬ್‌ಸೈಟ್ ಒಂದರಲ್ಲಿ (http://www.investigativeproject.org/) ವರದಿಯಾಗಿತ್ತು. ಅಮ್ನೆಸ್ಟಿಯ ಲಂಡನ್ ಕಚೇರಿಯ ಹಿರಿಯ ಉದ್ಯೋಗಿ ಗೀತಾ ಸಹಗಲ್ ಸಂಸ್ಥೆಯ ಇಂತಹ ದ್ವಂದ್ವಗಳನ್ನು ಖಂಡಿಸಿ ಹೊರಬಂದಿದ್ದರು.

ಯುದ್ಧ ಬೇಡ, ಸೇನೆ, ಪೊಲೀಸ್ ಕಾರ್ಯಾಚರಣೆ ಬೇಡ ಎನ್ನುವ ಅಮ್ನೆಸ್ಟಿ ಸಂಸ್ಥೆಯು ಭಯೋತ್ಪಾದನೆಯನ್ನು ಬೆಂಬಲಿಸುತ್ತಿದೆ. 2008ರ ನ.26ರಂದು ಮುಂಬೈನ ತಾಜ್ ಹೋಟೆಲ್ ಮೇಲೆ ದಾಳಿ ನಡೆಸಿ, ಸೆರೆ ಸಿಕ್ಕ ಲಷ್ಕರ್–ಎ–ತೊಯ್ಬಾ ಉಗ್ರ ಅಜ್ಮಲ್ ಕಸಬ್‌ಗೂ ಗಲ್ಲುಶಿಕ್ಷೆ ನೀಡಬಾರದು ಎಂದಿತ್ತು. ಉಗ್ರ ಅಜ್ಮಲ್ ಪರವಾಗಿ ಸಂಸ್ಥೆಯ ಭಾರತದ ಮುಖ್ಯ ಕಾರ್ಯದರ್ಶಿ ಜಿ. ಅನಂತ ಪದ್ಮನಾಭನ್ ಬರೆದ ಲೇಖನ ಇಂದಿಗೂ ಅದರ ವೆಬ್‌ಸೈಟ್‌ನಲ್ಲಿ ಕಾಣಬಹುದು.

**ಸಾರ್ವಭೌಮತೆ ಪ್ರಶ್ನಿಸುವುದು ಸರಿಯೇ?:** ಭಾರತದ ಸಂವಿಧಾನ, ರಾಷ್ಟ್ರಪತಿ, ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸುಪ್ರೀಂಕೋರ್ಟ್, ಸೈನ್ಯ ಇವು ಪ್ರಶ್ನಾತೀತ. ಸೈನ್ಯದಿಂದ ತಪ್ಪಾದರೆ ಶಿಕ್ಷಿಸಲು ಮಾರ್ಗಗಳಿವೆ. ಮಾನವ ಹಕ್ಕುಗಳ ಉಲ್ಲಂಘನೆ ನೆಪದಲ್ಲಿ ಆಮ್ನೆಸ್ಟಿ, ದೇಶಗಳ ಸಾರ್ವಭೌಮತೆ ಅಗೌರವಿಸುವ ಕೆಲಸ ನಡೆಸುತ್ತಿರುವ ದಟ್ಟ ಅನುಮಾನ ಮೂಡುತ್ತದೆ. ಅದು ಪದೇಪದೆ ಹಾಡುವ ನಾಗರಿಕ ಸಮಾಜದ ರಾಗದಲ್ಲಿ ಭಾರತದ ಸಂತ್ರಸ್ತ ಸಮೂಹಗಳು ಬರುವುದಿಲ್ಲ!

ವಿಶ್ವದ ಹಲವಾರು ದೇಶಗಳಲ್ಲಿ ಅಮ್ನೆಸ್ಟಿ ಸಂಸ್ಥೆಯ ಮೇಲೆ ದೇಶದ್ರೋಹದ ಆರೋಪದ ಗಂಭೀರ ಪ್ರಕರಣ ದಾಖಲಾಗಿದೆ. ಆದಾಗ್ಯೂ ಕಾಂಗ್ರೆಸ್ ಪಕ್ಷ ಹಾಗೂ ಅದರ ರಾಷ್ಟ್ರಮಟ್ಟದ ಪ್ರಭಾವಿ ಗುಂಪು ಬಹಿರಂಗವಾಗಿ ದೇಶವಿರೋಧಿ ಅಮ್ನೆಸ್ಟಿ ಪರವಾಗಿ ನಿಂತಿದೆ. ಅಮ್ನೆಸ್ಟಿ ಸಂಸ್ಥೆ ಹಾಗೂ ದೇಶದ್ರೋಹಿ ಘೋಷಣೆ ಕೂಗಿದವರನ್ನು ಶಿಕ್ಷಿಸುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ರಸ್ತೆಗಿಳಿದು ಪ್ರತಿಭಟಿಸುತ್ತಿದೆ. ದೇಶದ್ರೋಹಿಗಳ ವಿರುದ್ಧ ಕ್ರಮತೆಗೆದುಕೊಳ್ಳಬೇಕಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ, ಅಮ್ನಿಸ್ಟಿಗೆ ನಿರಪರಾಧಿ ಸರ್ಟಿಫಿಕೇಟ್ ಕೊಡುತ್ತಾ, ಶಾಂತಿಯುತ ಪ್ರತಿಭಟನೆ ಮಾಡುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುತ್ತಿದೆ. ಇದಕ್ಕೆ ರಾಜ್ಯಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದೆ.

## ವಿದೇಶಗಳಲ್ಲಿ ಅಮ್ನೆಸ್ಟಿಗೆ ನಿರ್ಬಂಧ

**ಇಂಗ್ಲೆಂಡಿನಲ್ಲಿ ವಕೀಲ ಪೀಟರ್ ಬೆನೆನ್‌ಸನ್‌ರಿಂದ 1961ರಲ್ಲಿ ಆರಂಭಗೊಂಡು ಹತ್ತಾರು ದೇಶಗಳಲ್ಲಿ ಹರಡಿರುವ ಅಮ್ನೆಸ್ಟಿ ಅನೇಕ ದೇಶಗಳಲ್ಲಿ ಗುರುತರ ಆರೋಪಗಳನ್ನು ಎದುರಿಸುತ್ತಿದೆ. ಉಗ್ರವಾದಿ ಸಂಘಟನೆಗಳು ಮಾನವಕುಲಕ್ಕೆ ಮಾಡುವ ತೀವ್ರಹಾನಿ, ಆಕ್ರಮಣಗಳನ್ನು ಏಕಮುಖವಾಗಿ ವರದಿ ಮಾಡುತ್ತದೆ ಎಂಬ ಆರೋಪ ಸಂಸ್ಥೆಯ ಮೇಲಿದೆ. ರಾಷ್ಟ್ರದ ಸುರಕ್ಷತೆಯ ದೃಷ್ಟಿಯಿಂದ ಚೀನಾ, ರಷ್ಯಾ, ಅಮೆರಿಕ, ಕಾಂಗೊ ಗಣರಾಜ್ಯ, ವಿಯೆಟ್ನಾಂ ಸೇರಿದಂತೆ ಹಲವಾರು ದೇಶಗಳಲ್ಲಿ ಅದರ ಕಾರ್ಯಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿದೆ.**

## 3 ವರ್ಷದಲ್ಲಿ 70 ಉಪಗ್ರಹ ಉಡ್ಡಯನ: ಇಸ್ರೋ

ಭಾರತೀಯ ಬಾಹ್ಯಾಕಾಶ ಸಂಸ್ಥೆ 'ಇಸ್ರೋ' ಮುಂದಿನ 3 ತಿಂಗಳ ಅವಧಿಯಲ್ಲಿ 4 ಪ್ರಮುಖ ಉಪ ಗ್ರಹಗಳ ಉಡ್ಡಯನಕ್ಕೆ ಸಿದ್ಧತೆ ನಡೆಸಿದೆ. 2015ರ ಆಗಸ್ಟ್‌ನಿಂದ 2016ರ ಆಗಸ್ಟ್ ಅವಧಿಯಲ್ಲಿ ಇಸ್ರೋ 10 ಉಪಗ್ರಹಗಳ ಉಡ್ಡಯನ ನಡೆಸಿದೆ. ಇದೇ ಸೆಪ್ಟೆಂಬರ್‌ನಲ್ಲಿ ಇನ್ಸಾಟ್–3ಡಿಆರ್, ಸ್ಕ್ಯಾಟ್‌ಸ್ಯಾಟ್–1 ಉಪಗ್ರಹ, ಅಕ್ಟೋಬರ್‌ನಲ್ಲಿ ಜಿಸ್ಯಾಟ್–18 ಮತ್ತು ನವೆಂಬರ್‌ನಲ್ಲಿ ರಿಸೋರ್ಸ್‌ಸ್ಯಾಟ್–2ಎ ಉಪಗ್ರಹ ಉಡ್ಡಯನ ನಡೆಸಲಾಗುವುದು. ಇಷ್ಟು ಮಾತ್ರವಲ್ಲ ಮುಂದಿನ ಮೂರು ವರ್ಷದಲ್ಲಿ ಒಟ್ಟಾರೆ 70 ಉಪಗ್ರಹಗಳ ಉಡ್ಡಯನಕ್ಕೂ ಯೋಜಿಸಲಾಗಿದೆ ಎಂದು ಇಸ್ರೋದ ಹಿರಿಯ ವಿಜ್ಞಾನಿ ಮೈಲಾಸ್ವಾಮಿ ಅಣ್ಣಾದೊರೈ ತಿಳಿಸಿದ್ದಾರೆ.

## ಓದುಗರೇ ಗಮನಿಸಿ

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04.**
**ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮೊ: 97312 64009
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.